
# ಡಾರ್ವಿನ್ ವಿವಾಹವಾದ

**‘ನಾನೇಕೆ ಮದುವೆಯಾಗಬಾರದು? ಮದುವೆ ಏಕಾಗಬೇಕು?’ – ಪ್ರಶ್ನೆಗಳನ್ನು ಎದುರಿಗಿಟ್ಟುಕೊಂಡು ಯೋಚಿಸಿದ ವಿಜ್ಞಾನಿ ಚಾರ್ಲ್ಸ್ ಡಾರ್ವಿನ್, ವಿವಾಹದ ಕುರಿತಂತೆ ವಾದ–ಪಟ್ಟಿಯನ್ನೇ ಸಿದ್ಧಪಡಿಸಿದ್ದರು. ಅಭಿಪ್ರಾಯಭೇದಗಳ ಹೊರತಾಗಿಯೂ ಡಾರ್ವಿನ್ ಕೈ ಹಿಡಿದ ಎಮ್ಮಾ ಅವರು ಅಭಿಮಾನ–ಪ್ರೇಮದಿಂದಲೇ ಗಂಡನ ಹಿತ ಕಾಪಾಡಿದ್ದರು.**

■ ಸಿಡ್ನಿ ಶ್ರೀನಿವಾಸ್



‘ಯಾವುದೋ ಕಣ ಮಾತ್ರದಿಂದ ಪ್ರಾರಂಭವಾದ ಜೀವ ವಿಕಸನಗೊಳ್ಳುತ್ತಾ ಒಂದು ಬೃಹತ್ ವೃಕ್ಷವಾಗಿ ಬೆಳೆಯಿತು. ವಿವಿಧ ಪ್ರಾಣಿಗಳು ಆ ಮಹಾವೃಕ್ಷದ ವಿವಿಧ ಕೊಂಬೆಗಳು ಅಷ್ಟೇ. ಮಾನವನೂ ಅಂತೆಯೇ. ಕಪಿ ಮತ್ತು ಮಾನವನ ಪಿತೃಗಳು ಒಂದೇ’ ಎಂದು ಸಾರಿ ಪ್ರಸಿದ್ಧರಾದವರು ಚಾರ್ಲ್ಸ್ ಡಾರ್ವಿನ್ (1809–1882). ಜಗತ್ತಿನ ಶ್ರೇಷ್ಠ ವಿಜ್ಞಾನಿಗಳಲ್ಲಿ ಒಬ್ಬರಾದ ಅವರು ಇಂತಹ ವಿಕಸನಕ್ಕೆ ಕಾರಣವಾದರೂ ಏನು ಎಂಬುದರ ಬಗ್ಗೆಯೂ ಬೆಳಕು ಚೆಲ್ಲಿದರು. ಅದೇ ನೈಸರ್ಗಿಕ ಆಯ್ಕೆ ಅಥವಾ Natural Selection.

ಅವರ ಸಿದ್ಧಾಂತ ಮತ್ತು ಹೆಬ್ಬೊತ್ತಿಗೆ Origin of Species by means of Natural Selection ಹೊರಬಂದ ನಂತರ ಜೀವನದ ಬಗ್ಗೆ ನಮ್ಮ ಆಲೋಚನಾ ಕ್ರಮವೇ ಬದಲಾಯಿತು. ‘ಅರ್ಹತಮದ ಉಳಿವು; ಸತ್ತ್ವವುಳ್ಳದ್ದರ ಉಳಿವು (Survival of the fittest)’, ‘ಜೀವನ ಸಂಗ್ರಾಮ; ಬದುಕಿನ ಹೋರಾಟ (Struggle for Existence)’ ಮೊದಲಾದ ಉಕ್ತಿಗಳು ನಮ್ಮ ಸಂಭಾಷಣೆಗಳಲ್ಲಿ ಹಾಸುಹೊಕ್ಕವು.

ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಧರ್ಮಶಾಸ್ತ್ರ ಓದಲು ಹೋದ ಡಾರ್ವಿನ್, ಧರ್ಮದ ಬದಲಾಗಿ ಸಸ್ಯ ವಿಜ್ಞಾನದಲ್ಲಿ ಪದವಿ ಪಡೆದರು. ನಂತರ ಭೂವಿಜ್ಞಾನದಲ್ಲಿ ಆಸಕ್ತಿ ತಳೆದು ‘ಬೀಗಲ್’ ಎಂಬ ಹಡಗಿನಲ್ಲಿ ದಕ್ಷಿಣ ಅಮೆರಿಕ, ಆಫ್ರಿಕಾ, ಆಸ್ಟ್ರೇಲಿಯಾ ಮುಂತಾದ ಖಂಡಗಳಲ್ಲಿ ಐದು ವರ್ಷ ಯಾನ ಮಾಡಿ ಅನೇಕಾನೇಕ ಮಾದರಿಗಳನ್ನು ಸಂಗ್ರಹಿಸಿದರು. ಇಂಗ್ಲೆಂಡಿಗೆ ಹಿಂತಿರುಗುವ ವೇಳೆಗೆ ದೊಡ್ಡ ವಿಜ್ಞಾನಿ ಆಗಿದ್ದರು. ತಮ್ಮ ಪ್ರವಾಸದಲ್ಲಿ ತಾವು ಕಂಡ ಪ್ರಾಣಿ ಪ್ರಭೇದಗಳಿಗೆ ಮಾರುಹೋದರು. ಒಂದೇ ಪ್ರಭೇದದಲ್ಲಿ ಕಾಣುವ ವೈವಿಧ್ಯದ ಬಗ್ಗೆ ಯೋಚಿಸತೊಡಗಿದರು. ಉತ್ತರವಲಯದ ಶೀತ ಪ್ರದೇಶಗಳ ಪ್ರಾಣಿಗಳಿಗೂ ದಕ್ಷಿಣವಲಯದ ಶೀತ ಪ್ರದೇಶಗಳ ಪ್ರಾಣಿಗಳಿಗೂ ಏಕೆ ವ್ಯತ್ಯಾಸಗಳಿವೆ? ಹಿಂದೆ ವಾಸವಿದ್ದ ದೈತ್ಯಾಕಾರದ ಪ್ರಾಣಿಗಳು ಕಾಲಕ್ರಮೇಣ ಏಕೆ ಕುಬ್ಜವಾದವು? ಇತ್ಯಾದಿ, ಇತ್ಯಾದಿ.

28ರ ವಯಸ್ಸಿನ ಡಾರ್ವಿನ್ ಲಂಡನ್ನಿನ ತಮ್ಮ ತಂದೆಯ ಮನೆಯಲ್ಲಿ ಈ ಪ್ರಶ್ನೆಗಳ ಕುರಿತು ಚಿಂತಿಸುತ್ತಿದ್ದರು. ಆಗ ಅವರಲ್ಲಿ ಆಲೋಚನೆಯೊಂದು ಮೊಳೆಯಿತು. ತಮ್ಮ ಸ್ನೇಹಿತರಲ್ಲಿ ಅನೇಕರು ಮದುವೆಯಾಗಿದ್ದಾರೆ, ತಂದೆಯರೂ ಆಗಿದ್ದಾರೆ. ತನ್ನ ಗೆಳತಿಯಾಗಿದ್ದ ಫ್ಯಾನಿ ಈಗ ಮೂರು ಮಕ್ಕಳ ತಾಯಿ! ತಾನು ಮಾತ್ರ ಇನ್ನೂ ಬ್ರಹ್ಮಚಾರಿ! ‘ನಾನೇಕೆ ಮದುವೆಯಾಗಬಾರದು?’ ಎಂಬ ಪ್ರಶ್ನೆ ಅವರ ತಲೆಯನ್ನು ಹೊಕ್ಕಿತು. ಅದರ ಬಗ್ಗೆ ಆಲೋಚನೆ ಪ್ರಾರಂಭವಾಯಿತು.

ಮದುವೆ ಜೀವನಕ್ಕೆ ಖುಷಿ ತಂದುಕೊಡುತ್ತದೆ. ಇದರಲ್ಲಿ ಎರಡನೇ ಮಾತಿಲ್ಲ, ನಿಜ. ಆದರೆ ಸಂಸಾರ ತೂಗಿಸಲು ಹಣ ಬೇಡವೇ? ತನಗಿನ್ನೂ ಕೆಲಸವಿಲ್ಲ. ಹಾಗಾದರೆ ಯಾವುದಾದರೂ ವಿಶ್ವವಿದ್ಯಾಲಯದಲ್ಲಿ ಕೆಲಸ ಹುಡುಕುವುದೇ? ಏನು ಮಾಡುವುದೋ ತಿಳಿಯದೆ ನೇರ ಹೋಗಿ ತಂದೆಯನ್ನು ಕೇಳಿದರು. ತಂದೆ ರಾಬರ್ಟ್ ಡಾರ್ವಿನ್, ಮಗನನ್ನು ಅರ್ಥ ಮಾಡಿಕೊಂಡರು. ಅವರಾದರೋ ಬಲು ಶ್ರೀಮಂತರು. 100,000 ಪೌಂಡುಗಳ (ಇಂದಿನ 3,604,000 ಅಮೆರಿಕನ್ ಡಾಲರುಗಳು) ಆಸ್ತಿ ಇದ್ದ ಅವರಿಗೆ ವರ್ಷಕ್ಕೆ 10000 ಪೌಂಡುಗಳ (ಇಂದಿನ 360,400 ಅಮೆರಿಕನ್ ಡಾಲರುಗಳು) ವರಮಾನ. ‘ನೀನು ಮದುವೆಯಾಗು. ನಿನ್ನ ಸಂಸಾರದ ಖರ್ಚಿಗೆ ನಾನು ಹಣ ಕೊಡುತ್ತೇನೆ’ ಎಂದರು! ತಂದೆಯಿಂದ ಆಶ್ವಾಸನೆ ಬಂದ ಮೇಲೆ ತಾತ್ವಿಕ ಚಿಂತನೆ ಆರಂಭವಾಯಿತು.

‘ಏತಕ್ಕಾಗಿ ಮದುವೆಯಾಗಬೇಕು?’

ಡಾರ್ವಿನ್ ಒಂದು ಹಾಳೆಯಲ್ಲಿ ಮದುವೆಯ ಪರ ಮತ್ತು ವಿರುದ್ಧ ಅಂಶಗಳನ್ನು ಬರೆಯುತ್ತಾ ಬಂದರು.